# ವಿಜಯದಾಸರು

## ಉಗಭೋಗಗಳು

Contributed by Pranesh Hejib

೧

ಅನಂತ ಅಪರಾಧ ಮಾಡಿದ ಕಾಲಕ್ಕು

ನೀನೆಣಿಸುವನಲ್ಲ ಸತ್ಯ ಕಾಮಧೇನೆಂದು

ಶ್ರೀ ನಾರಿ ಬೊಮ್ಮ ಮಹೇಂದ್ರಾದ್ಯರು ನಿತ್ಯ

ಎಣಿಕೆ ಮಾಳ್ಪರು ಎಲ್ಲೆಲ್ಲಿ ನಿರೀಕ್ಷಿಸಿ

ಮಾಣದೆ ಮತಿಯಿಂದ ತಲೆದೂಗಿ

ಅನುಭವ ಏನೆಂಬೆ ನಿನ್ನಯ ಬಲು ಪ್ರತಾಪಕ್ಕೆ

ಮಾನವ ಗುಣಿಸಿ ನೆಲೆಗಾಣಬಲ್ಲನೆ

ಮೇಣು ಗಿರಿಜೇಶಗೆ ಕಾಶೀ ಪಟ್ಟಣದಲ್ಲಿ

ನೀ ನಿಲಿಸಿದೆ ಬ್ರಹ್ಮ ಹತ್ಯವ ಓಡಿಸಿ ಆನಂದ

ವನವಾಸ ವಿಜಯವಿಠಲರೇಯ ಜಾಹ್ನವಿ ಪಡದಾ॥

೨

ಒಂದು ಕೈಯಲ್ಲಿ ಖಡ್ಗ ಒಂದು ಕೈಯಲ್ಲಿ ಹಲಗೆ

ಅಂದವಾಗಿ ಪಿಡಿದುಕೊಂಡು ದಿವಾರಾತ್ರಿಯಲ್ಲಿ

ಒಂದು ಬದಿಯಲ್ಲಿ ನಿತ್ಯ ಬಾರಾಸನಾಗಿ

ಹಿಂದು ಮುಂದುಪದ್ರವಾಗದಂತೆ

ಇಂದಿರೇರಮಣ ಕಾಯುತ್ತಲಿರೆ ಎನಗಾವ

ಬಂಧನಗಳಿಲ್ಲ ಧನ್ಯ ಧನ್ಯ

ಕಂದರ್ಪನಯ್ಯ ಸಿರಿ ವಿಜಯವಿಠಲರೇಯ

ಎಂದೆಂದಿಗಾಪತ್ತು ಬರಲೀಸನೊ॥

೩

'ನ ತೇ ವಿಷ್ಣೋ' ಎಂದೆಂಬೊ ನಿಗಮಾರ್ಥ

ಹಿತದಿಂದಲಿ ತಿಳಿದು ಹಿರಿದಾಗಿ ಅರಿದು

ಕ್ಷಿತಿಸುರರ ಗರ್ಭದಲ್ಲಿ ಬಂದು ಮಾ

ರುತಿ ಮತದಲಿ ಬಲು ಜ್ಞಾನಿಯಾಗೊ

ಇತರ ಮತವ ನಂಬಿ ಓದದಿರು ವೇದ

ಗತಿಯಿಲ್ಲದೆ ಹಾಯ ಹಾಯನಾಗುವದೇನೊ

ಯತಿಗಳಿಗೆ ಸಿಕ್ಕ ವಿಜಯವಿಠಲಂಗೆ

ಪ್ರತಿ ಕಕ್ಷಿಯಿಲ್ಲ ದೇವತೆಗಳೊಳು ಕೇಳು

ಮತಿಗೆಡದಿರು ನೀನು ಮತಿಗೆಡದಿರು ನೀನು॥

೪

ಪುರಂದರದಾಸರು ವೈಶ್ಯ ಮಾದಮ್ಮನ

ವರ ಕುಮಾರನ ಬದುಕಿಸಿದರು ಗಡ

ಗುರು ವ್ಯಾಸ ಮುನಿರಾಯರು ಭೂಪತಿಗೆ ಬಂದದು

ಸ್ತರವಾದ ಕುಹುಯೋಗ ಬಿಡಿಸಿದರು ಗಡ

ಸಿರಿ ನಾರಾಯಣ ಯೋಗಿ ವ್ಯಾಸಮುನಿಗೆ ಬಂದ

ಉರಗ ಬಾಧೆಯ ಕಳೆದು ಪಾಲಿಸಿದರು ಗಡ

ಹರಿಯೆ ಈ ಕಲಿಯುಗದಿ ನಿನ್ನ ಶರಣರು ಇಂಥಾ

ಚರಿತೆ ಮಾಡಿಪ್ಪರು ಆವನಾದರು ಇನಿತು

ಸ್ಮರಣೆಗೈದವಗೆ ಮನಸು ನಿರ್ಮಲ ಕಾಣೊ

ಧರೆಯೊಳು ಈ ಮನುಜರಾಡಿದ್ದೇ ವೇದ

ನೆರೆ ನಂಬಿದವರಿಗೆ ರೋಗ ಹಿಂಗಳೆವುದು

ಪರಮ ಶುದ್ಧನ ಮಾಡಿ ಪೊರೆವನು ತಡಿಯದೆ

ಕರುಣಾಕರ ನಮ್ಮ ವಿಜಯವಿಠಲ ನಿನ್ನ

ಚರಣ ಧೇನಿಸುವವರ ಪಡಿದೊತ್ತು ನಾನಯ್ಯ॥

ಝ

ಸುಡು ಸುಡು ಯಾಚಕನ ಜನ್ಮ ವ್ಯರ್ಥ ವ್ಯರ್ಥ

ಕೊಡುವೆನೆಂದರೆ ಬಹು ದಿವಸ ಕಾಯ್ದು

ಅಡಿಗೆ ಬಿದ್ದು ಅವನ ಮನಸ್ಸು ತನ್ನ ಕಡಿಗೆ

ಮಾಡಿಕೊಂಡು ಯೋಚಿಸುತ

ಗಡಗಿಯೊಳಗಿನ ನೊಣದಂತೆ ಸುತ್ತುತ ಆಸೆ

ಬಿಡಲಾರದೆ ಹಿಡಿಯಲಾರದೆ ಮಿಡುಕುತ

ಕಡುಮೂರ್ಖನಂತೆ ನಾನಾದೆನು ಪ್ರಾಣೇಶ

ಕಡು ಸಂಪೂರ್ಣ ವಿಜಯವಿಠ್ಠಲರೇಯ

ಕೊಡುಗೈ ದಾತನಿಗೆ ಇನಿತು ಪರರಾಶೆ॥

ಅ

ಬಿಂಬ ಪೊಳೆಯುತಿರೆ ದಿಂಬ ದಂಡನೆ ಯಾಕೆ

ತುಂಬಿದೂಟವಿರೆ ತಿರುಪೆ ಯಾಕೆ

ಕೊಂಬೆಯಲಿಪ್ಪ ಹಣ್ಣು ತಾನೇ ಬೀಳುತ್ತಿರಲು

ಕುಂಭಿಣಿಯಲಿ ಕೆಡಹಿ ಫಲ ಮೆಲುವರೆ

ಹಂಬಲಗೊಳಸಲ್ಲ ಕರ್ಮವೆಂಬುದು ತೊರದು ಜ್ಞಾ

ನಾಂಬುಧಿಯೊಳಗಿರು ನಂಬಿ ಹರಿಯ ಸಾರು

ಗಂಭೀರ ಪುರುಷ ಶ್ರೀ ಹರಿ ವಿಜಯವಿಠಲರೇಯನ

ಬಿಂಬ ನೋಡಿದವರಿಗೆ ಇಂಬುಂಟು ವೈಕುಂಠದಲ್ಲಿ॥

೭

ಮಾಯಾವಾದಿ ಪೋದಲ್ಲಿ ಸುಜನರೆಲ್ಲ

ದೃಢವಾಗಿ ತಿಳಿವುದು ಅಡ್ಡಗಂಧದವನ ಮುಖನೋಡದಿರಿ

ನೀಡದಿರಿ ಗ್ರಾಸ ನಿಮ್ಮ ಗುರುಗಳಾಣೆ

ಮೂಢ ಆವಾತನ ಮತವು ಸುಡಲಿ ಸುಡಲಿ

ಹೆಡ್ಡತೊತ್ತಿನ ಪೋದ ಮಡದಿಯೊಳು ಪೊಕ್ಕು

ಹೆದ್ದೊರೆಬಲದಿಂದ ಪೊಡವಿಗಧಿಕಶಿವ ವಿಜಯವಿಠ್ಠಲನ್ನ

ಪಾದಕ್ಕೆ ನೀವು ಬೀಳಿರೋ ಅಡ್ಡಬೀಳಿರೊ॥

೮

ಪ್ರಮೋದ ಸಂವತ್ಸರದಲೆನ್ನವರಿಗೆ

ರೋಮ ಕೊಂಕದು ಕಾಣೊ ನೀನೊಲಿದರೆ

ಪ್ರಮೋದವಲ್ಲದೆ ಕ್ಲೇಶಲೇಶವಿಲ್ಲ

ಸ್ವಾಮಿ ಲಾಲಿಸಿ ಕೇಳೊ ಇಷ್ಟ ದೈವ

ಪ್ರಮಾದದಿಂದಲಿ ಬಂದಿದ್ದ ಕಾಲಕ್ಕೆ

ಗೋಮಾಯುವಿನಂತೆ ಓಡಿ ಪೋಪುದು

ಶ್ರೀ ಮನೋಹರ ನಮ್ಮ ವಿಜಯವಿಠಲ ನಿನ್ನ

ನಾಮ ನೆನೆಸಿದ ಮಾರ್ಕಾಂಡ ಮುನಿಯ ನೋಡು॥

೯

ರುದ್ರಾಂತರ್ಗತ ನಾರಸಿಂಹ ರೋಗನಿವಾರಣ

ಭದ್ರವಾಗಲಿ ಇವಗೆ ಇವನ ಪತ್ನಿ

ಆರ್ದ್ರಳಾಗಿ ಚಾಲ್ವರಿದು ವಂದಿಪಳು ಸ

ಮುದ್ರ ಶಾಯಿ ಇವಳ ಮಂಗಳ ಸೂತ್ರ

ನಿದ್ರೆಯೊಳಗಾದರು ಸ್ಥಿರವಾಗಿರಲಿ ಉ

ಪದ್ರಗಳು ಬಂದರು ಪರಿಹರಿಸು

ಅದ್ರಿ ಧರಿಸಿ ಗೋಕುಲ ಕಾಯ್ದ ಕರುಣಾಸ

ಮುದ್ರ ಆಪತ್ಕಾಲ ಬಾಂಧವನೆ

ಕ್ಷುದ್ರ ದೇವತೆಗಳಿಗೆ ಶಕ್ತಿ ಈ ಪರಿಯುಂಟೆ

ಛಿದ್ರ ಸಾಸಿರವಿರೆ ಕ್ಷಮಿಸಬೇಕು

ಮುದ್ರೆಧರರಪಾಲ ವಿಜಯವಿಠಲನೆ ದಾ

ರಿದ್ರ್ಯ ಭಂಜನ ಎನಗೆ ಇದೆ ಮಾತುರ ಕೊಡೊ॥

೧೦

ಸಲಹುವುದು ಎನ್ನ ಸಲಗಿಯ ದೈವವೆ

ಸಲಹದಿದ್ದರೆ ಬಿರುದು ಸಲ್ಲುದೇನೋ

ಸಲಗೀಯ ನೀನಿತ್ತು ಸಲೀಜನ ಮನೋಬಯಕೆ

ಸಲಿಸಿ ರಣಾಗ್ರದಲಿ ಸಲಹಲಿಲ್ಲವೆ ದೇವ

ಸುಲಲಿತಾ ಮನ್ನಾರನಿಲಯ ವಿಜಯವಿಠಲ

ಸಲೆಯನ್ನು ನಿನ್ನ ನಾಮ ನೆನಸಲಾಗನಿದನೆಂದು (?)

ನಿನ್ನ ಮನ್ನಿಸಲಾಗನಿವನೆಂದು (?)

೧೧

ಸಿರಿರಮಣ ನಿನ್ನಯ ಚರಣ ಯುಗ್ಮಗಳಿಗೆ

ಶಿರಬಾಗಿ ನಾ ನಿನಗೆ ಬಿನ್ನೈಸುವೆ

ಶರಣರಿಗೆ ಬಂದ ಆಪತ್ತು ಪರಿಹರಿಸೆಂದು

ಕರುಣವಾರಿಧೆ ನಿನ್ನ ಪ್ರಾರ್ಥಿಸುವೆನೊ

ಸ್ಥಿರ ಮಾಡು ವಚನವನು ದೂರ ನೋಡದೆ ಈಗ

ಕರಿ ಮೃಕುಂಡಜ ಮುಖರ ಪೊರೆದ ಕರುಣಿ

ಇರಲಿ ಈ ನರನೋರ್ವ ಧರಿಯೊಳಗೆ ಕೆಲವು ದಿನ

ಸರಿದಿಹುದು ಆಯುಷ್ಯವಿಲ್ಲವೆಂಬ್ಯಾ

ಎರಡು ವರುಷ ಎನ್ನಾಯು ಎರದೆ ಧಾರೆಯ ಇವಗೆ

ವರ ಸಂತತಿ ಇವರಿಗಿರುವುದೆಂದು

ಅರಿದು ಪ್ರಾರ್ಥಿಪೆ ಭಕುತರಿಗೆ ಸಂಜೀವನೆ

ಶರಣ ವತ್ಸಲನೆಂಬ ಬಿರಿದೊಳ ಹಾಕೊ

ಕರುಣಾಕರ ನಮ್ಮ ಸಿರಿ ವಿಜಯವಿಠಲ ನಿನ್ನ

ಕರ ಮುಗಿದು ಪ್ರಾರ್ಥಿಸುವೆ ಕರುಣಿಸವನ॥

೧೨

ನಿನ್ನ ಪಾದಾಂಬುಜವ ನೋಡಿದ ಮನುಜಗೆ

ಘನ್ನ ಪಾಪಗಳುಂಟೆ ಘನ್ನವರ್ಣ

ನಿನ್ನ ಪೋಲುವ ದೈವ ಆವಾವ ಕ್ಷೇತ್ರದಲ್ಲಿ

ಬಣ್ಣಿಸಿ ನೋಡಿದರು ಕಾಣೆನಯ್ಯ

ಕಣ್ಣಿಲಿ ನೋಡಿದರು ಕರ್ಣದಲಿ ಕೇಳಿದರು

ಚಿನ್ನಹ ಮಾಡಿ ತುತಿಸಿದ ಕಾಲಕ್ಕು

ಎನ್ನ ಮೊದಲು ಮಾಡಿ ಪರಮೇಷ್ಠಿ ತನಕ ಸಂ

ಪನ್ನ ಜ್ಞಾನದಲ್ಲಿ ಗುಣಿಸಿದರು

ಪನ್ನಗಶಾಯಿ ಸಿರಿ ವಿಜಯವಿಠಲರೇಯ

ನಿನ್ನ ಮಹಿಮೆಗೆ ನಮೋ ನಮೋ ಎಂದೆಂಬೆನೊ॥

೧೩

ನಿನ್ನ ದಾಸನೆಂದೆನಿಸಬೇಕಾದರೆ

ಭಂಗಪಡಲುಬೇಕು ದಿನ ಪ್ರತಿದಿನದಲ್ಲಿ

ಅನ್ನವಸ್ತ್ರಕಿಲ್ಲದೆ ತಿರುಗಬೇಕು

ಬೆನ್ನುಬಿಡದೆ ರೋಗಂಗಳು ಬರಬೇಕು

ಪನ್ನಗಶಯನ ಶ್ರೀ ವಿಜಯವಿಠಲರೇಯ

ಎನ್ನನೀ ಪರಿಯಲ್ಲಿ ಮಾಡಿದ ಬಗೆ ಏನು?

೧೪

ನಾರಾಯಣನ ನಾಮಕೆ ಇತರ ನಾಮಗಳೆಣೆಯುಂಟೆ

ತಾರತಮ್ಯದಿ ದೇವತೆಗಳೊಳಗೆ ಹಿರಿತನಕೆ ಸಮವುಂಟೆ

ಧಾರುಣಿಯೊಳಗನ್ನದಾನಕೆ ಸಮಾನ ಉಂಟೆ

ಧೀರ ವಿಜಯವಿಠಲನ್ನ ದ್ವಾದಶಿ ತಿಥಿಗೆ ಸಮವುಂಟೆ॥

೧೫

ದೇವ ನಿನ್ನ ಪಾದದಾಣೆ ನಿನ್ನಭಕ್ತರಾಣೆ

ಈ ವಚನ ಸತ್ಯ ಮಾಡುವುದು ಎನಗೆ

ಇವನ ಜೀವದಾನ ಕೊಡು ಇದೇ ದೇಹದಲ್ಲಿ

ಮೂವರುಷ ಎನ್ನಾಯುಷ್ಯದೊಳಿತ್ತು

ಕಾವುದಲ್ಲದೆ ಇನ್ನು ಸುಮ್ಮನಿಪ್ಪದು ಸಲ್ಲ

ಸಾವಿರ ಬ್ರಹ್ಮ ಭೋಜನವ ಮಾಡಿಸುವೆನೊ

ದೇವ ನಿನ್ನ ಪಾದದಾಣೆ ಭಕ್ತರಾಣೆ

ಈ ವ್ಯಾಳಿಗೆ ಅಪ ಬಂದ ಮೃತ್ಯು ಓಡಿಸಬೇಕು

ಭೂ ವಿಭುದರೆಲ್ಲ ಕಷ್ಟಪಡುವುದ ನೋಡು

ಕೋವಿದರಾಯ ಎನ್ನಾಣೆ ಕೇಳಿದಗತ್ಯ

ಪಾವನ ಮೂರುತಿ ವಿಜಯವಿಠಲರೇಯ

ಜೀವೇಶನಿಂದಲಿ ರಕ್ಷಣೆ ಮಾಡಿಸು॥

೧೬

ದೂರದಲ್ಲಿದ್ದೀಯೇನೋ ಮೊರೆಯಿಟ್ಟು ಬೇಡಿದರೆ

ಆರು ನೀವೆಂದು ಕೇಳದಿಪ್ಪುದು ಸರಿಯೆ

ದಾರಿದ್ರನ ಸೊಲ್ಲು ವ್ಯರ್ಥವಾಗಿದೆ ನೋಡು

ತಿರುಗಿ ಕೂಗಿದ್ದರಿಂದಲೇನಾಹುದೊ

ಧೀರ ನೀ ಕುರುಡನೊ ಮೂಕನೊ ಬಧಿರನೊ

ಕೀರುತಿ ಒಲ್ಲೆನೆಂಬೊ ಮೌನವೊ ಏನಿದು

ಧಾರುಣಿಯೊಳಿದ್ದವರ ನೋಡೆ, ನಾನೊಬ್ಬನೆ

ಭಾರವೇನೊ ತಂದೆ ಅಕಟಕಟ

ಸಾರಿದವರ ಪೊರೆವ ವಿಜಯವಿಠಲ ನಿನ್ನ

ಕಾರುಣ್ಯತನಕೆ ನಾನೊಬ್ಬನೆ ಎರವೆ॥

೧೭

ತತ್ವಾಭಿಮಾನಿಗಳಿರಾ ಉತ್ತರ ಪಾಲಿಪುದು

ಎತ್ತಿ ಕರವ ಮುಗಿವೆ ವಿನಯದಲ್ಲಿ

ಆತ್ಮದೊಳಗೆ ನಿಮ್ಮ ವ್ಯಾಪಾರ ಘನವಯ್ಯ

ತತ್ತಸ್ಥಾನದಲ್ಲಿ ನಿತ್ಯವಾಗಿ

ದೈತ್ಯರಿಗೆ ಸರ್ವದ ನಿಮ್ಮ ಪ್ರೇರಣೆಯುಂಟು

ಅತ್ತ ಎಳೆಸದಿರಿ ದುಸ್ಸಂಗಕ್ಕೆ

ಚಿತ್ತದಲ್ಲಿ ನೀವೇ ನಿಜ ವ್ಯಾಪಾರ ಮಾಡುವರು

ಸತ್ಯಕ್ಕೆ ಎರಗುವ ಮಾರ್ಗವಿತ್ತು

ಉತ್ತಮ ಗುಣದಲ್ಲೆ ಮೊದಲೆ ನಿಮ್ಮ ಪೂಜಿಪ

ಅರ್ಥಿಯಾಗಲಿ ಆ ತರುವಾಯದಿ

ಉತ್ತಮ ಶ್ಲೋಕ ಸಿರಿವಿಜಯವಿಠಲನ್ನ

ತುತಿಸಿ ಆತನ್ನ ಚರಣ ನೋಳ್ಪದ ಮಾಡು॥

೧೮

ಕಠಿಣವಾದರು ನಿನ್ನ ನಾಮ ಅನುಗಾಲ

ಜಠರಾದೊಳಗೆ ಇಟ್ಟು ಎಂತಾದರಾಗೆ

ನಟನೆಯ ಮಾಡುತ ತಿರುಗುವ ಮಾನವಗೆ

ಅಟವಿಯಲ್ಲಾದರು ಪೂರ್ಣ ಸುಖವು

ಸಟಿಯಲ್ಲ ಈ ಮಾತು ಅಜಭವಾದಿಗಳೆ ಬಲ್ಲರು

ದಿಟನೆ ತಿಳಿದು ಪೇಳಿದರು ಪುಸಿಯಲ್ಲ

ವಟಪತ್ರಶಾಯಿ ನಮ್ಮ ವಿಜಯವಿಠಲರೇಯ

ವಿಠಲಾ ಎಂದು ನುಡಿದವಗೆ ಆವ ಭಯವುಂಟು॥

೧೯

ಆ ವಿಜಯವಿಠಲನ್ನ ಚರಣವಿರಲು

ಕಾವರಾರೆಂದು ಇನ್ಯಾಕೆ ಮರಗುವಿ ಪ್ರಾಣಿ

ಕ್ಷೀರವಾರಿಧಿ ತಡೆಯ ಸೇರಿ ಮನಗಟ್ಟಿಕೊಂಡು

ನೀರ ಮಜ್ಜಿಗೆ ಕಾಣದಳುವದೇನೋ

ಸಾರಿದರೆ ನಿನ್ನ ಕುಲ ಸಹಿತಕ್ಕೆ ಸುಖವೀವ

ನಾರದವರದ ಸಿರಿ ವಿಜಯವಿಠಲ ಎನ್ನ ಸ್ವಾಮಿ॥

೨೦

ಅನಂತ ಕಲ್ಪಕ್ಕೆ ನಿನ್ನ ಮೊರೆ ಬಿದ್ದವಗೆ

ಖಿನ್ನವಿಲ್ಲವೆಂಬುದ ಕೇಳಿ ಬಲ್ಲೆ

ಚಿಣ್ಣ ಧ್ರುವ ಪ್ರಹ್ಲಾದ ಮೊದಲಾದ ಭಕುತರ

ಘನ್ನತೆ ಏನೆಂಬೆ ಲೋಕದಲ್ಲಿ

ಮನ್ನಿಸು ಮಹರಾಯ ವಿಜಯವಿಠಲರೇಯ

ಚಿನ್ನಹ ಕೈಕೊಂಡು ಭಕುತನ್ನ ಪಾಲಿಸು॥